ಊ) ಇಲ್ಲ.

ಋ) ಹೌದು.

ೠ) ಅಮೆರಿಕಾ ಸಂಯುಕ್ತ ಸಂಸ್ಥಾನದ ಮೆಚಾಚ್ಯುಯೇಡ್ಸ್ ರಾಜ್ಯದ ಕಾಸಗಿ ಸಂಸ್ಥೆ ಮೆಸರ್ಸ್ VHB (inc) ಹಾಗೂ ಈ ದೇಶದ ಮೆಸರ್ಸ್ ಕಲ್ಯಾಣ ಗ್ರೂಪರವರುಗಳ ಸಹಯೋಗ ಸಂಸ್ಥೆಯೊಡನೆ ''ತಿಳಿವಳಿಕೆ'' ಪತ್ರಕ್ಕೆ ಸಹಿ ಹಾಕಲಾಗಿದೆ. ಅವರು ವಿವರವಾದ ಯೋಜನಾ ವರದಿ ಸಲ್ಲಿಸಿದ ಅವರ ಮೂಲಕ ಕಾಮಗಾರಿಯನ್ನು ತೆಗೆದುಕೊಳ್ಳುವ ಬಗ್ಗೆ ತೀರ್ಮಾನಿಸಲಾಗುವುದು.

## ವಿಷಯ: ಪಂಚಾಯತ್ ರಾಜ್ಯ ಕಾಯ್ದೆ ತಿದ್ದುಪಡಿ.

ಶ್ರೀ ಗುರುಪಾದಪ್ಪ ನಾಗಮಾರಹಳ್ಳಿ(ಔರಾದ್)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:150(457)

ಮಾನ್ಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಈಗಿರುವ ಪಂಚಾಯತ್ ರಾಜ್ಯ ಕಾಯ್ದೆಯಲ್ಲಿ ಹಲವಾರು ಲೋಪದೋಷಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ ಈಗಿನ ಕಾಯ್ದೆಗೆ ಯಾವಾ ತಿದ್ದುಪಡಿಯನ್ನು ತರಲಾಗುವುದು.

**ಶ್ರೀ. ಎಂ.ವಿ. ಪ್ರಕಾಶ್**
**(ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು)**

ಅ) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ

1993 ಹಾಗೂ ಕರ್ನಟಕ ಪಂಚಾಯತ್

ರಾಜ್ (ತಿದ್ದುಪಡಿ) ಸುಗ್ರೀವಾಜ್ಞೆ 1995.

ಪರಿಶೀಲಿಸಿ ಅಧಿನಿಯಮಕ್ಕೆ ತಿದ್ದುಪಡಿ.

ಅವಶ್ಯಕತೆ ಬಗ್ಗೆ ಶಿಪಾರಸ್ಸು ಮಾಡುವ ಸಲುವಾಗಿ ಸರ್ಕಾರವು ಡಾ.ಕೆ.ಎಸ್. ಕೃಷ್ಣಸ್ವಾಮಿಯವರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿಯನ್ನು ರಚಿಸಿದೆ. ಸಮಿತಿಯ ವರದಿ ಬಂದ ನಂತರ ಕಾಯ್ದುಗೆ ತಿದ್ದುಪಡಿ ತರುವ ಬಗ್ಗೆ ಪರಿಶೀಲಿಸಲಾಗುವುದು.